ಆದೇಶ ನೀಡಿದೆ. ಆದರೆ ಈ ಪ್ರಕರಣವು ಇನ್ನೂ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಉಳಿದಿದೆ.

## ಮಂಡ್ಯದಲ್ಲಿ "ಜಿಲ್ಲಾ ಅಂಬೇಡ್ಕರ್ ಭವನ" ನಿರ್ಮಾಣ

2072 (2611) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ನಗರದಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ "ಜಿಲ್ಲಾ ಅಂಬೇಡ್ಕರ್ ಭವನ" ವಿಳಂಬವಾಗುತ್ತಾ ಇರುವುದಕ್ಕೆ ಕಾರಣಗಳೇನು;

ಆ) ಈ ಭವನದ ನಿರ್ಮಾಣ ಮಾಡಲು ಇರುವ ಅಡೆತಡೆಗಳನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಸರ್ಕಾರ ಈವರೆವಿಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು;

ಈ) ಭವನದ ನಿರ್ಮಾಣಕ್ಕೆ ಸಂಪನ್ಮೂಲದ ಕ್ರೋಢೀಕರಣದ ಬಗ್ಗೆ ಈವರೆವಿಗಿನ ಪ್ರಗತಿಯೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಡಾ: ಅಂಬೇಡ್ಕರ್ ಭವನ ನಿರ್ಮಾಣಕ್ಕಾಗಿ ಸರ್ಕಾರದಿಂದ ನಿವೇಶನ ಮಂಜೂರು ಮಾಡಿರುವ ಕ್ರಮಬದ್ಧತೆಯನ್ನು ಪ್ರಶ್ನಿಸಿ ಕೆಲವು ವ್ಯಕ್ತಿಗಳು ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ದಾಖಲಿಸಿರುವುದರಿಂದ ನಿರ್ಮಾಣ ಕಾರ್ಯ ಪ್ರಾರಂಭಿಸುವುದು ವಿಳಂಬವಾಗಿರುತ್ತದೆ.

ಆ) ಈ ಸಂಬಂಧ ಕೋರ್ಟ್ ವ್ಯಾಜ್ಯ ಇತ್ಯರ್ಥಪಡಿಸಲು ಜಿಲ್ಲಾಧಿಕಾರಿಗಳು, ಮಂಡ್ಯರವರು ಅಗತ್ಯ ಕ್ರಮ ಕೈಗೊಂಡಿತ್ತಾರೆ.

ಇ) ಮಂಡ್ಯ ಪಟ್ಟಣದಲ್ಲಿ ಮಿನಿ ಅಂಬೇಡ್ಕರ್ ಭವನ ನಿರ್ಮಿಸಲು ರೂ. 3.00 ಲಕ್ಷಗಳನ್ನು ಬಿಡುಗಡೆ ಮಾಡಿರುತ್ತಾರೆ.

ಈ) ಈ ಭವನ ನಿರ್ಮಾಣಕ್ಕೆ ಸಂಪನ್ಮೂಲ ಕ್ರೋಢೀಕರಣದ ಪ್ರಗತಿ ಈ ಕೆಳಕಂಡಂತಿದೆ:

| | |
|---|---|
| 1) ಜಿಲ್ಲಾ ಪಂಚಾಯತ್, ಮಂಡ್ಯ | ರೂ. 10.00 ಲಕ್ಷಗಳು |
| 2) ನಗರ ಸಭೆ, ಮಂಡ್ಯ | ರೂ. 3.00 ಲಕ್ಷಗಳು |
| 3) ಸರ್ಕಾರದಿಂದ | ರೂ. 3.00 ಲಕ್ಷಗಳು |
| ಒಟ್ಟು | **ರೂ. 16.00 ಲಕ್ಷಗಳು** |

## ಮಂಡ್ಯ ಜಿಲ್ಲೆಯಲ್ಲಿ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಹಾಗೂ ಮೀನುಗಾರರಿಗೆ ವಸತಿ ಗೃಹ

2073 (2612) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪ್ರಸ್ತುತ ಆರ್ಥಿಕ ವರ್ಷದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಮೀನುಗಾರರಿಗೆ ವಸತಿ ಗೃಹ ನಿರ್ಮಾಣ ಮಾಡಲು ಮಂಜೂರಾಗಿರುವ ಹಣ ಎಷ್ಟು? ಈವರೆವಿಗೆ ಖರ್ಚಾಗಿರುವುದೆಷ್ಟು? (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು);

ಆ) ಮಂಡ್ಯ ಜಿಲ್ಲೆಯಲ್ಲಿ ಒಳನಾಡು ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸಲು ಕಾರ್ಯಕ್ರಮ ಕೈಗೊಂಡಿದ್ದಲ್ಲಿ ಅದರ ಬಗೆಗಿನ ವಿವರಗಳೇನು;